

ನೆಚ್ಚಿನ ಖಳನಟ ವಜ್ರಮುನಿಗೆ ರಾಜ್‌ರಿಂದ ಸಿಹಿ



ಆಸೆಯಿಂದ ಅಪರೂಪಕ್ಕೊಮ್ಮೆ ಸಾತ್ವಿಕ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ ಎನ್ನುವ ಪರಿಸ್ಥಿತಿಯಿದೆ.

ದರ್ಶನ್ ಅವರು ನಾಯಕನಾಗಿ ಗುರ್ತಿಸಿಕೊಂಡಿದ್ದು, ತಾರಾವರ್ಚಸ್ಸು ಗಳಿಸಿದ್ದು ಒರಟು ಹುಡುಗನ ಪಾತ್ರಗಳಲ್ಲಿಯೇ. 'ಕರಿಯ', 'ದಾಸ', 'ಕಲಾಸಿಪಾಳ್ಯ'ದಿಂದ ಇತ್ತೀಚಿನ 'ಜಗ್ಗೂದಾದ' ಸಿನಿಮಾದವರೆಗೆ ದರ್ಶನ್ ಮಚ್ಚು ಹಿಡಿದಾಗ ಗೆದ್ದಿರುವುದೇ ಹೆಚ್ಚು. 'ಓಂ', 'ಜೋಗಿ' ಸಿನಿಮಾಗಳ ಖ್ಯಾತಿಯ ಶಿವರಾಜ್‌ಕುಮಾರ್ ಅವರಂತೂ ತಾವು ಮಚ್ಚು ಹಿಡಿಯುವುದನ್ನು ಜನರು ಮೆಚ್ಚಿಕೊಂಡಿದ್ದಾರೆ ಎಂದುಕೊಂಡಿರುವಂತಿದೆ. ಸಾರ್ವಜನಿಕ ಸಮಾರಂಭಗಳಲ್ಲಿ ಕಲಾವಿದರು ಹಾಡನ್ನೋ ಸಂಭಾಷಣೆಯನ್ನೋ ಹೇಳಿ ಚಪ್ಪಾಳೆ ಗಿಟ್ಟಿಸುವಂತೆ ಶಿವರಾಜ್ ಮಚ್ಚು ಹಿಡಿದು ಕ್ಯಾಟ್‌ವಾಕ್ ಮಾಡಿದ್ದಿದೆ. 'ಸಂತೆಯಲ್ಲಿ ನಿಂತ ಕಬೀರ'ನಂಥ ಸಿನಿಮಾ ತೆರೆಕಂಡ ನಂತರ 'ಟಗರು' ರೀತಿಯ ರೌಡಿಸಂ ಚಿತ್ರವನ್ನು ಶಿವಣ್ಣ ಒಪ್ಪಿಕೊಂಡ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು ತಕರಾರು ಎತ್ತಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇನ್ನು, ಚಿತ್ರರಂಗಕ್ಕೆ ಪರಿಚಯಗೊಳ್ಳುವ ಬಹುತೇಕ ಯುವನಟರು ರೌಡಿಸಂ ಕಥನಗಳು ಅಥವಾ ಒರಟು ಹುಡುಗನ ರೂಪದಲ್ಲೇ ಪ್ರೇಕ್ಷಕರ ಎದುರು ಬರುತ್ತಿದ್ದಾರೆ. ನಾಯಕರೇ ಖಳಪೋಷಾಕಿನಲ್ಲಿ ಕಂಗೊಳಿಸುತ್ತಿರುವಾಗ 'ವಿಲನ್' ಎನ್ನುವ ಪರಿಣತ ಪ್ರಭೇದ ಬಡವಾಗುವುದು ಅಸಹಜವೇನೂ ಅಲ್ಲ.

## ದೂರದ ಬೆಟ್ಟ ನುಣ್ಣಗೆ

ಬೇರೆ ಭಾಷೆಗಳಿಂದ ಕನ್ನಡಕ್ಕೆ ನಾಯಕಿಯರನ್ನು ಆಮದು ಮಾಡಿಕೊಳ್ಳುವುದು ಕನ್ನಡ ಚಿತ್ರರಂಗದ ಹಳೆಯ ಚಾಳಿಗಳಲ್ಲೊಂದು. ಇತ್ತೀಚಿನ ವರ್ಷಗಳಲ್ಲಿ ಆಮದಿನ ಪಟ್ಟಿಗೆ ಖಳನಾಯಕ ಪಾತ್ರಧಾರಿಗಳೂ ಸೇರಿಕೊಂಡಿರುವುದು ವಿಶೇಷ. ಪ್ರಸ್ತುತ ಕನ್ನಡ ಚಿತ್ರರಂಗದಲ್ಲಿ ಮುಂಚೂಣಿಯಲ್ಲಿರುವ ಖಳನಟ ರವಿಶಂಕರ್ ಮೂಲತಃ ತೆಲುಗಿನವರು. ಸಿನಿಮಾದಿಂದ ಸಿನಿಮಾಕ್ಕೆ ಕನ್ನಡದವರೇ ಆಗಿಹೋಗುತ್ತಿರುವ ರವಿಶಂಕರ್ ಅದ್ಭುತ ಪ್ರತಿಭಾವಂತ ಕೂಡ. ಇದೇ ಮಾತನ್ನು ಆಶಿಶ್ ವಿದ್ಯಾರ್ಥಿ, ಸೋನು ಸೂದ್, ರಾಹುಲ್ ದೇವ್ ಹಾಗೂ ದಿವಂಗತ ರಘುವರನ್ ಬಗೆಗೂ ಹೇಳಬಹುದು. ಆದರೆ, ಇವರನ್ನೇ ಎಷ್ಟು ಸಿನಿಮಾಗಳಲ್ಲಿ ನೋಡುವುದು? ಕನ್ನಡದಲ್ಲೇ ಪ್ರತಿಭಾವಂತ ಕಲಾವಿದರು ಇರುವಾಗ ಬೇರೆ ಭಾಷೆಯಿಂದ ನಟರನ್ನು ಕರೆದುಕೊಂಡು ಬರುವುದು ಎಷ್ಟರಮಟ್ಟಿಗೆ ಸರಿ?

ಕಲಾವಿದರ ಆಮದಿನ ಸಂದರ್ಭದಲ್ಲೂ ನಾಯಕರ ಹಸ್ತಕ್ಷೇಪವನ್ನು

---


ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ತಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ
ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಆಕಿಂದ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಮುಖಿ ತಂತ್ರಗಳಿಂದ ನಿಮ್ಮ ದುಷ್ಟಕಷ್ಟ, ದೀರ್ಘಕಾಲವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450